C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No.270/2023 ಪಿ.ಡಬ್ಲ್ಯೂ-1 ಸಿ.ಡಬ್ಲ್ಯೂ-2

ದಿನಾಂಕಃ- 29.09.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮಹೇಶ |
| ತಂದೆಯ ಹೆಸರು | ಪುಟ್ಟಶೆಟ್ಟಿ |
| ವಯಸ್ಸು | 44 ವರ್ಷ |
| ಉದ್ಯೋಗ | ಕೊಡಿಯಾಲ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀರಂಗಪಟ್ಟಣ ತಾಲ್ಲೂಕು. |
| ವಾಸ | ಕೊಡಿಯಾಲ, ಶ್ರೀರಂಗಪಟ್ಟಣ ತಾಲ್ಲೂಕು. |

ಮುಖ್ಯ ವಿಚಾರಣೆಃ- ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ-

1. ನಾನು ಕಳೆದ 4 ವರುಷಗಳಿಂದ ಕೊಡಿಯಾಲ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ.

2. ನನ್ನ ಸ್ವಂತ ಊರು ಚಾಮರಾಜನಗರ ತಾಲ್ಲೂಕು ಹರವೇ ಹೋಬಳಿ ಹಾಲನಹುಂಡಿ ಗ್ರಾಮ.

3. ನಾನು ದಿಃ 27.06.2023 ರಂದು ಪಂಚಾಯಿತಿ ಕಛೇರಿಯಲ್ಲಿ ಇದ್ದಾಗ ಅರಕೆರೆ ಪೊಲೀಸರು ನನ್ನ ಕಛೇರಿಗೆ ಬಂದು ಕೊಡಿಯಾಲ ಗ್ರಾಮದಲ್ಲಿ ಶಶಿ ಕುಮಾರ ಎನ್ನುವವರು ತಮ್ಮ ಬಾಡಿಗೆ ಮನೆಯ ಪರಿಧಿಯಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿದ್ದಾರೆ ಎನ್ನುವ ಮಾಹಿತಿ ಬಂದಿದ್ದು, ಸದರಿ ಮಾಹಿತಿಯ ವಿಚಾರವಾಗಿ ತನಿಖೆ ನಡೆಸುವಾಗ ಪಂಚರಾಗಿ ಕೆಲಸ ಮಾಡಲು ಬರುವಂತೆ ಕರೆದರು. ಆದ್ದರಿಂದ ನಾನು ಶ್ರೀರಂಗಪಟ್ಟಣ ಅರಕೆರೆ ಪೊಲೀಸ್ ಠಾಣೆಗೆ ಹೋದೆನು. ಅರಕೆರೆ ಪೊಲೀಸ್

ಠಾಣೆಯಲ್ಲಿ ಪೊಲೀಸರು ನನಗೆ ಮೇಲೆ ಹೇಳಿದ ವಿಚಾರಗಳ ಕುರಿತು ಪಂಚರಾಗಿ ಕೆಲಸ ಮಾಡುವಂತೆ ನೋಟೀಸು ಕೊಟ್ಟರು. ಈ ಸಾಕ್ಷಿ ಕಡತದಲ್ಲಿರುವ 27.06.2023 ನೇ ದಿನಾಂಕದ ನೋಟೀಸಿನ ಮೇಲೆ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿ ಇರುವ ನೋಟೀಸನ್ನು ನಿಪಿ–1 ಎಂದೂ ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ–1 (ಎ) ಎಂದು ಗುರುತಿಸಲಾಯಿತು.

4. ಪೊಲೀಸರು ನನ್ನ ಜೊತೆಯಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಕೊಡಿಯಾಲ ಗ್ರಾಮದ ಡೈರಿ ಹತ್ತಿರ ಇದ್ದ ಮನೆಯ ಹತ್ತಿರ ಕರೆದುಕೊಂಡು ಹೋಗಿ ತನಿಖೆ ಮಾಡಿದರು. ಪೊಲೀಸರು ತನಿಖೆ ಮಾಡಿದ ಜಾಗದಲ್ಲಿ 1 ಗಾಂಜಾ ಗಿಡ ಇತ್ತು.

5. ಪೊಲೀಸರು ಮೇಲೆ ಹೇಳಿದಂತೆ ಕಂಡು ಬಂದ 1 ಗಾಂಜಾ ಗಿಡವನ್ನು ಕಿತ್ತು ತೂಕ ಮಾಡಿದಾಗ ಅದರ ತೂಕ 770 ಗ್ರಾಂ ಬಂದಿತು.

6. ಪೊಲೀಸರು ಮೇಲೆ ಹೇಳಿದಂತೆ ಸಿಕ್ಕಿದ 1 ಗಾಂಜಾ ಗಿಡವನ್ನು ನನ್ನ ಸಮಕ್ಷಮ ಮಹಜರು ತಯಾರಿಸಿ ಫೋಟೋ ತೆಗೆಸಿ ಪೊಟ್ಟಣ ಕಟ್ಟಿ ವಶಪಡಿಸಿಕೊಂಡರು. ಮೇಲೆ ಹೇಳಿದ ಮನೆಯ ಮಾಲೀಕರ ಹೆಸರು ರಮಾ. ಪೊಲೀಸರು ತಯಾರಿಸಿದ ಮಹಜರಿನ ಮೇಲೆ ನಾನು ಮತ್ತು high school teacher ಮತ್ತು ಪೊಲೀಸರು ಸಹಿ ಮಾಡಿದ್ದೇವೆ.

7. ಈ ಸಾಕ್ಷಿ ಕಡತದಲ್ಲಿ ಇರುವ ಮಹಜರಿನ ಮೇಲೆ ತನ್ನ ಸಹಿ ಇರುವುದನ್ನು ಗುುರತಿಸಿದ್ದಾರೆ. ಈ ಸಾಕ್ಷಿಯ ಸಹಿ ಇರುವ ಮಹಜರನ್ನು ನಿಪಿ–2 ಎಂದೂ ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

8. ಪೊಲೀಸರು ಮೇಲೆ ಹೇಳಿದಂತೆ ಕೊಡಿಯಾಲ ಗ್ರಾಮದಲ್ಲಿ ಒಂದು ಮನೆಯ ಹತ್ತಿರ ತನಿಖೆ ಮಾಡಿ ಗಾಂಜಾ ಗಿಡ ಇರುವುದನ್ನು ಪತ್ತೆ ಮಾಡಿ ವಶಪಡಿಸಿಕೊಂಡಾಗ ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಶಶಿ ಕುಮಾರ್ ಇದ್ದರು.

9. ಈ ಸಾಕ್ಷಿ ಕಡತದಲ್ಲಿ ಇರುವ 6 ಫೋಟೋಗಳಲ್ಲಿ ತಾನು, ಪೊಲೀಸರು, ಗಾಂಜಾ ಗಿಡ, ಗಾಂಜಾ ಗಿಡ ತೂಕ ಮಾಡಿದ machine ಕಾಣಿಸುತ್ತಿರುವುದಾಗಿ

ಗುರುತಿಸಿದ್ದಾರೆ. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿದ 6 ಫೋಟೋಗಳನ್ನು ನಿಪಿ–3 ರಿಂದ ನಿಪಿ–8 ರವರೆಗೆ ಗುರುತಿಸಲಾಯಿತು.

10. ಮೇಲೆ ಹೇಳಿದ ಘಟನೆಗಳ ಕುರಿತು ನಾನು ಪೊಲೀಸರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ.

11. ದಿ 28.06.2023 ರಂದು ಅರಕೆರೆ ಪೊಲೀಸರು ಶಶಿ ಕುಮಾರ್ ರವರು ವಾಸವಾಗಿದ್ದ ಮನೆಯ ದಾಖಲೆಯನ್ನು ಕೊಡುವಂತೆ ಪತ್ರ ಕಳುಹಿಸಿದ್ದರು. ಸದರಿ ಪತ್ರದ ಆಧಾರದ ಮೇಲೆ ನಾನು ಕೊಡಿಯಾಲ ಗ್ರಾಮದ 69/75/38/2 ನೇ ಆಸ್ತಿಗೆ ಸಂಬಂಧಿಸಿದ ಖಾತೆ ದಾಖಲೆ ಪ್ರತಿಯನ್ನು ಪೊಲೀಸರಿಗೆ ಕಳುಹಿಸಿದ್ದೇನೆ. ಈ ಸಾಕ್ಷಿ ಕಡತದಲ್ಲಿ ಇರುವ ಪೊಲೀಸರು 28.06.2023 ರಂದು ಕಳುಹಿಸಿದ ಪತ್ರ ಮತ್ತು ಮೇಲೆ ಹೇಳಿದ ಆಸ್ತಿಗೆ ಸಂಬಂಧಿಸಿದ ದಾಖಲೆಯ ಪ್ರತಿಯ ಮೇಲೆ ತಮ್ಮ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿದ ದಾಖಲೆಗಳನ್ನು ನಿಪಿ.9 ಮತ್ತು ನಿಪಿ.10 ಎಂದೂ, ಮತ್ತು ಈ ಸಾಕ್ಷಿಯ ಸಹಿಗಳನ್ನು ನಿಪಿ.9(ಎ) ಮತ್ತು 10(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ– ಆರೋಪಿ ಪರವಾಗಿ ಶ್ರೀ. ರವೀಂದ್ರ ವಕೀಲರಿಂದಃ–</u>

1. ಕೊಡಿಯಾಲ ಗ್ರಾಮದಲ್ಲಿ ಇರುವ ನಮ್ಮ ಕಛೇರಿ ಮತ್ತು ಪೋಲಿಸರ ಜೊತೆಯಲ್ಲಿ ನಾನು ಹೋಗಿದ್ದ ಶಶಿ ಕುಮಾರ ರವರು ಬಾಡಿಗೆಯಂತೆ ವಾಸವಾಗಿದ್ದ ಮನೆಯ ನಡುವೆ ಸುಮಾರು 300 ಮೀಟರ್ ಅಂತರ ಇದೆ. ಆರೋಪಿ ವಾಸವಾಗಿದ್ದ ಮನೆಯಿಂದ ಸುಮಾರು 50 ಮೀಟರ್ ದೂರದಲ್ಲಿ ಆಲಗೂರು ಟಾರು ರಸ್ತೆ ಇದೆ.

2. ಆರೋಪಿ ವಾಸವಾಗಿದ್ದ ಮನೆಯ 4 ಬದಿಗಳಲ್ಲಿ ಸುಮಾರು 20 ಮೀಟರ್ ದೂರದಲ್ಲಿ ವಾಸದ ಮನೆಗಳು ಇವೆ. ಆರೋಪಿಯ ಮನೆ ಮತ್ತು ಅವರ ಮನೆಯ ಅಕ್ಕಪಕ್ಕದ ಜಾಗಗಳಲ್ಲಿ ಒಕ್ಕಲುತನ ಮಾಡಿರುವುದು ಕಂಡು ಬರುತ್ತದೆ.

3. ಆರೋಪಿ ವಾಸವಾಗಿದ್ದ ಮನೆಯ ಮುಖ್ಯ ಬಾಗಿಲಿನಿಂದ ಸುಮಾರು 20 ಅಡಿ ಅಂತರದಲ್ಲಿ ನಾನು ಹೇಳುತ್ತಿರುವ ಗಾಂಜಾ ಗಿಡ ಇತ್ತು. ಗಾಂಜಾ ಗಿಡ ಇತ್ತು ಎನ್ನುವ ಜಾಗದ ದಾಖಲೆಗಳಲ್ಲಿ ಆರೋಪಿಯ ಹೆಸರು ಬರೆದಿಲ್ಲ ಎನ್ನುವುದು ನಿಜ. ಪೊಲೀಸರು

ನನ್ನ ಸಮಕ್ಷಮ ಸ್ಥಳವನ್ನು ತನಿಖೆ ಮಾಡಿದಾಗ ನಿಪಿ.10 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವ ರಮಾ ಎನ್ನುವವರು ಹಾಜರಿರಲಿಲ್ಲ.

4. ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಹೇಳುವ ಗಾಂಜಾ ಗಿಡಕ್ಕೂ ಮತ್ತು ಆರೋಪಿಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ಮತ್ತು ನಾನು ಆರೋಪಿ ವಾಸವಾಗಿದ್ದ ಎನ್ನುವ ಮನೆಯ ಹತ್ತಿರ ಹೋಗಿ ತನಿಖೆ ಮಾಡಿದಾಗ ಆ ಮನೆಯ ಸುತ್ತಮುತ್ತಲೂ ಇದ್ದ ಮನೆಯಲ್ಲಿ ವಾಸವಾಗಿದ್ದ ವ್ಯಕ್ತಿಗಳು ಬಂದಿರಲಿಲ್ಲ ಎನ್ನುವುದು ನಿಜ.

5. ಪೊಲೀಸರು ಕಿತ್ತಿದ್ದ ಗಾಂಜಾ ಗಿಡದಿಂದ ಎಲೆಗಳನ್ನು, ಬೀಜಗಳನ್ನು ಮತ್ತು ಕಾಂಡಗಳನ್ನು ಪ್ರತ್ಯೇಕ ಮಾಡಿಲ್ಲ.

6. ನಾನು ಪೊಲೀಸರ ಮಾತು ಕೇಳಿಕೊಂಡು ನಿಪಿ–2 ರಲ್ಲಿ ಗುರುತಿಸಿರುವ ದಾಖಲೆಯ ಮೇಲೆ ಸಹಿ ಮಾಡಿದ್ದೇನೆ ಮತ್ತು ಪೊಲೀಸರ ಜೊತೆ ನಿಂತುಕೊಂಡು ಫೋಟೋ ತೆಗೆಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿಕೊಂಡು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ– ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ–

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.